

ರಂಗ: ಅಪ್ಪಾ ಒಂದು ಮಾತು ಹೇಳಲಾ?
ಗುಂಡ: ಹೇಳು.
ರಂಗ: ಫೇಸ್ ಬುಕ್ ನಲ್ಲಿ ನನ್ನ ಹದಿನೈದು ಫೇಕ್ ಖಾತೆಗಳಿವೆ.
ಗುಂಡ: ಹರಾಮ್ ಖೋರ್, ಇದನ್ನೆಲ್ಲ ನನಗೆ ಯಾಕೆ ಹೇಳ್ತಿದ್ದೀಯಾ?
ರಂಗ: ನೀವು ಹತ್ತು ದಿನಗಳಿಂದ ಟೀ ಕುಡಿಯಲು ಕರೀತಾ ಇದ್ದಿರಲ್ಲ ಆ ಮೋನಿಕಾ ಬೇರೆ ಯಾರೂ ಅಲ್ಲ, ನಾನೇ!

★★★

ಟೀಚರ್: ಒಂದರಿಂದ ಹತ್ತರವರೆಗೆ ಸಂಖ್ಯೆ ಹೇಳೋ ಗುಂಡ.
ಗುಂಡ : 1, 2, 4, 5, 6, 7, 8, 9, 10 ಆಯ್ತು ಟೀಚರ್.
ಟೀಚರ್: ಮೂರು ಎಲ್ಲೋ?
ಗುಂಡ: ಮೂರು ಸತ್ತೋಗಿದೆ ಟೀಚರ್.
ಟೀಚರ್: ಯಾರೋ ಹೇಳಿದ್ದು?
ಗುಂಡ: ನಿನ್ನೆ ಪೇಪರ್‌ನಲ್ಲಿ ಬಂದಿತ್ತು ಟೀಚರ್, ರಸ್ತೆ ಅಪಘಾತದಲ್ಲಿ ಮೂರು ಸಾವು ಅಂತ.

★★★

ಹೊಸದಾಗಿ ಮದುವೆಯಾಗಿ ಮನೆಗೆ ಬಂದ ಸೊಸೆ, ಎಷ್ಟು ದಿನವಾದರೂ ಮನೆ ಕೆಲಸಕ್ಕೆ ಕೈ ಹಾಕಲಿಲ್ಲ. ಬೇಸತ್ತ ಮಗ, ತಾಯಿಗೆ ಉಪಾಯ ಹೇಳಿಕೊಟ್ಟ. ಅದರಂತೆ ಮರುದಿನ ಬೆಳಿಗ್ಗೆ, ಕಸಗುಡಿಸಲು ತಾಯಿ ಪೊರಕೆ ಹಿಡಿದುಕೊಂಡು ಬರುತ್ತಿದ್ದಂತೆ, ಮಗ ಉತ್ಸಾಹದಿಂದ, ತಾಯಿಯ ಕೈಯಿಂದ ಪೊರಕೆ ಕಸಿದುಕೊಂಡು ಹೇಳಿದ.

'ಅಮ್ಮಾ ನನಗಾಗಿ ಎಷ್ಟೊಂದು ಕಷ್ಟ ಪಡುತ್ತೀಯಾ, ನಾನೇ ಕಸಗುಡಿಸುವೆ ಇನ್ನು ಮೇಲೆ' ತಕ್ಷಣ, ತಾಯಿ ಮಗನ ಕೈಯಿಂದ ಪೊರಕೆ ಕಸಿದುಕೊಂಡು ಹೇಳಿದಳು, 'ಎಲ್ಲಿಯಾದರೂ ಉಂಟೆ, ಮಗೂ, ನಮಗಾಗಿ ನೀನೂ ದುಡಿಯುತ್ತೀಯಾ, ನಾನೇ ಗುಡಿಸುವೆ.'

ಅಮ್ಮ, ಮಗ ಹೀಗೆ ಪರಸ್ಪರ ಐದು ನಿಮಿಷ ನಾನು– ನಾನು ಎಂದು ಕಿತ್ತಾಡುತ್ತಿದ್ದರು.

ತಡೆಯಲಾರದೆ ಸೊಸೆ, ಮಧ್ಯ ಪ್ರವೇಶಿಸಿದಳು, 'ನಿಮ್ಮ ಜಗಳ ನಿಲ್ಲಿಸಿ, ನಾನೊಂದು ಸಲಹೆ ಕೊಡುವೆ' ಎಂದಳು. 'ಅಬ್ಬ ಕೊನೆಗೂ ದಾರಿಗೆ ಬಂದಳು, ಎಂದು ಅಮ್ಮ, ಮಗ, ಖುಷಿಯಿಂದ 'ಹೇಳು' ಎಂದರು.

ಸೊಸೆ ಹೇಳಿದಳು, 'ಇಬ್ಬರೂ ಏಕೆ ಕಿತ್ತಾಡುತ್ತೀರಾ, ಅತ್ತೇ ನೀವು ಬೆಸ ಸಂಖ್ಯೆಯ ದಿನ ಕಸ ಗುಡಿಸಿ, ನಿಮ್ಮ ಮಗ ಸರಿ ಸಂಖ್ಯೆಯ ದಿನ ಕಸ ಗುಡಿಸಲಿ' ಎಂದಳು.

(ಸಂಗ್ರಹ) **ಇಂದು, ತಿಪಟೂರು**

ಪ್ರಿನ್ಸಿಪಾಲ್: ( ಸಿಟ್ಟಿನಿಂದ ) ಎಲ್ಲಾದರೂ ನೀನು ಮೂರ್ಖ, ದಡ್ಡ, ಪೆದ್ದ, ವಿವೇಕಹೀನ, ಕೋಡಂಗಿಯರನ್ನು ಒಬ್ಬರಲ್ಲೇ ನೋಡಿದ್ದಿಯಾ ..?
ವಿದ್ಯಾರ್ಥಿ: (ತಲೆ ತಗ್ಗಿಸುತ್ತಾ) ಇಲ್ಲಾ ಸಾರ್..!
ಪ್ರಿನ್ಸಿಪಾಲ್: ತಲೆ ತಗ್ಗಿಸ ಬೇಡ ... ನನ್ನನ್ನು ನೋಡು.

★★★

ಹೆಂಡತಿ ತವರು ಮನೆಯಿಂದ ಗಂಡನಿಗೆ ಫೋನ್ ಮಾಡಿದಳು:
ಹೆಂಡತಿ: ರೀ ಹೇಗಿದ್ದೀರ?
ಗಂಡ: ಹಾಯಾಗಿದ್ದೀನಿ ಕಣೆ.
ಹೆಂಡತಿ: ನನ್ನ ನೆನಪು ಬರಲ್ವಾ? ಬಂದಾಗ ಏನ್ ಮಾಡ್ತೀರಾ?
ಗಂಡ: ನಿಂಗೆ ಇಷ್ಟವಾದ ಗುಲಾಬ್ ಜಾಮೂನ್, ವೆನಿಲ್ಲಾ ಐಸ್ ಕ್ರೀಮ್, ತಿಂತೀನಿ ಕಣೆ! ಹೌದು.. ನನ್ ನೆನಪು ಬಂದ್ರೆ ನೀನೇನ್ ಮಾಡ್ತೀಯಾ?
ಹೆಂಡತಿ: ನಿಮಗೆ ಇಷ್ಟವಾದ ರಾಯಲ್ ಸ್ವ್ಯಾಗ್, ಕಿಂಗ್ ಸಿಗರೇಟು, ರಜನಿಗಂಧ ಪ್ಯಾಕೆಟ್ ಎದುರಿಗೆ ಇಟ್ಟುಕೊಂಡು ಕೂತಿದ್ದೀನಿ ಕಣ್ರೀ...

(ಸಂಗ್ರಹ) **ಪೂರ್ಣಿಮಾ ಹೆಜಮಾಡಿ**



ಹೆಂಡತಿ: ರೀ ನಂಗೆ ಯಾಕೋ ತುಂಬಾ ಬೋರ್ ಆಗ್ತಿದೆ. ಜೋಕ್ ಕಟ್ ಮಾಡ್ರೀ.
ಗುಂಡ: ಅದೊಂದು ಮಾತ್ರ ಸಾಧ್ಯವಿಲ್ಲ. ಬೇಕಾದ್ರೆ ಚೂಡಿದಾರ್ ಕಟ್ ಮಾಡ್ತೀನಿ, ಬ್ಲೌಸ್ ಕಟ್ ಮಾಡ್ತೀನಿ, ಆದ್ರೆ ಜೋಕ್ ಕಟ್ ಮಾಡೋಕೆ ಮಾತ್ರ ಬರೋಲ್ಲ.
ಹೆಂಡತಿ: ಯಾಕೆ ಬರೋಲ್ಲ.
ಗುಂಡ: ಯಾಕೇಂದ್ರೆ ನಾನು ನಿನಗೆ ಮೊದಲೇ ಹೇಳಿದ್ದೇನಲ್ಲ. ನಾನೊಬ್ಬ ಟೈಲರ್ ಅಂತ.

★★★

ಕನ್ಯಾಪಿತೃ: ನನ್ನ ಮಗಳ ಮದುವೆಗೆ ನನ್ನ ಒಪ್ಪಿಗೆಯೇನೋ ಇದೆ. ಆದರೆ ನನಗೆ ಹುಡುಗನ ಅಂತಸ್ತು ತುಂಬಾ ಮುಖ್ಯ. ಹಾಗಿದ್ದರೆ ಮಾತ್ರ ನಾನು ಮಗಳ ಮದುವೆ ಮಾಡ್ತೀನಿ.
ದಲ್ಲಾಳಿ: ಏನು ರಾಯರೇ ನೀವು ಹೀಗಂತೀರಾ? ಹುಡುಗನ ಅಂತಸ್ತು ಕೇಳಿದ್ರೆ ನೀವು ದಂಗಾಗಿಬಿಡ್ತೀರಾ? ಅವನು ಕೋರಮಂಗಲದ ಅಪಾರ್ಟ್‌ಮೆಂಟಿನ 33ನೇ ಅಂತಸ್ತಿನಲ್ಲಿದ್ದಾನೆ.

★★★

ಗುಂಡ: ನನ್ನ ಮೊಮ್ಮಗಳಿಗೆ ಇನ್ನೂ ಮೂರೂವರೆ ವರ್ಷ. ಅವಳು ತನ್ನ ಹೆಸರನ್ನು ಹಿಂದು ಮುಂದಾಗಿ ಹೇಳುತ್ತಾಳೆ, ಗೊತ್ತಾ?
ಗೆಳೆಯ: ಅರೆ ಹೌದಾ? ಏನು ಅವಳ ಹೆಸರು?
ಗುಂಡ: ಕನಕ.

(ಸಂಗ್ರಹ) **ಎಂ.ಕೆ.ಮಂಜುನಾಥ್, ಬೆಂಗಳೂರು**